









ಬಿಡಿಸಲು ತಿಂಗಳುಗಳೇ ಕಳೆದುಹೋಗುತ್ತವೆ. ತಾಳ್ಮೆ ಇರಬೇಕಾಗುತ್ತದೆ' ಎನ್ನುತ್ತಾರೆ ಮ್ಯಾದಾರ್.

ಕಣ್ಣಿನ ಮೇಲೆ ಹೆಚ್ಚು ಒತ್ತಡ ಬೀಳುವ ಚುಕ್ಕಿ ಚಿತ್ರ ಕಲೆಯು ಕಲಾವಿದನಿಂದ ಹೆಚ್ಚಿನ ಸಹನೆ ಬೇಡುವಂತಹದ್ದು. ಮೊದಲು ರೇಖಾಚಿತ್ರ ಬಿಡಿಸಿಕೊಂಡು, ನಂತರ ಚುಕ್ಕಿಗಳನ್ನು ಇಡಲಾಗುತ್ತದೆ. ಮ್ಯಾದಾರ್ ಅವರಿಗೆ ಹುಟ್ಟಿನಿಂದ ಒಂದು ಕಣ್ಣು ಮಸುಕು, ಅಸ್ಪಷ್ಟ ದೃಷ್ಟಿ. ಆ ಕೊರತೆ ಅವರ ಚಿತ್ರಗಳಲ್ಲಿ ಕಾಣಿಸುವುದಿಲ್ಲ.

ರಾಜ್‌ಕುಮಾರ್ ಮಾತ್ರವಲ್ಲದೆ – ಮಹಾತ್ಮ ಗಾಂಧಿ, ಸುಭಾಷ್ ಚಂದ್ರ ಬೋಸ್, ಬಿ.ಆರ್. ಅಂಬೇಡ್ಕರ್, ಲಾಲ್ ಬಹದ್ದೂರ್ ಶಾಸ್ತ್ರಿ, ಬಾಬು ರಾಜೇಂದ್ರಪ್ರಸಾದ್, ಜವಾಹರಲಾಲ್ ನೆಹರು, ಮದರ್ ತೆರೇಸಾ ಸೇರಿದಂತೆ ಹಲವು ಪ್ರಾತಃಸ್ಮರಣೀಯರ ಚುಕ್ಕಿ ಚಿತ್ರಗಳನ್ನು ಮ್ಯಾದಾರ್ ರಚಿಸಿದ್ದಾರೆ. ಇಟಗಿ ದೇವಾಲಯದ ಚಿತ್ರವೂ ಅವರ ಸಂಗ್ರಹದಲ್ಲಿದೆ.

ಮ್ಯಾದಾರ್ ಅವರೇ ಸ್ಥಾಪಿಸಿದ 'ಮ್ಯಾದಾರ್ ಲಲಿತ ಕಲಾ ಪ್ರತಿಷ್ಠಾನ' ಚಿತ್ರಕಲೆಯ ಕುರಿತಂತೆ ಹಲವು ಚಟುವಟಿಕೆಗಳನ್ನು ನಡೆಸುತ್ತಿದೆ. ಪ್ರತಿಷ್ಠಾನದಿಂದ ಶಿಕ್ಷಣತಜ್ಞ ಡಾ. ಎಚ್. ನರಸಿಂಹಯ್ಯ ಹಾಗೂ ಕಲಾಗುರು ಎಂ. ಶಂಕರರಾವ್ ಹೆಸರಿನಲ್ಲಿ ಸಾಧಕರಿಗೆ ಪ್ರಶಸ್ತಿ ನೀಡಿ ಗೌರವಿಸಲಾಗುತ್ತಿದೆ.

ಮ್ಯಾದಾರ್ ಅವರ ರಾಜ್ ಅಭಿಮಾನ ಕೇವಲ ಚುಕ್ಕಿ ಚಿತ್ರಗಳಿಗೆ ಮೀಸಲಾಗಿಲ್ಲ. ಅವರು ತಮ್ಮ ಮಕ್ಕಳಿಗೆ ರಾಜ್ ಕುಟುಂಬದ ಸದಸ್ಯರಾದ ಮುತ್ತುರಾಜ್, ಪುನೀತ್, ಪಾರ್ವತಮ್ಮ, ಶಾರದಮ್ಮ ಅವರ ಹೆಸರುಗಳನ್ನು ಇಟ್ಟಿದ್ದಾರೆ.

ಪ್ರತಿಕ್ರಿಯಿಸಿ: feedback@sudha.co.in